ಆ) ಸದರಿ ಬಡಾವಣೆಯಲ್ಲಿ ಕಾದರಿಸಿರುವ ನಾಗರೀಕ ಸೌಲಭ್ಯ ನಿವೇಶನಗಳ ವಿವರ (ಬಡಾವಣೆಗಳ ಹಾಗೂ ವಿಸ್ತೀರ್ಣ ವಿವರಗಳನ್ನು ನೀಡುವುದು),

ಇ) ಯಾವ ಮೂಲಗಳಿಂದ ಹಣವನ್ನು ಪಡೆದು ಬಡಾವಣೆಗಳನ್ನು ನಿರ್ಮಾಣ ಮಾಡಲಾಗಿದೆ (ಸಂಸ್ಥೆಗಳ ವಿವರ)

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು)

ಅ) 1990ರಿಂದ ಇದುವರೆವಿಗೂ ಒಂದು ವಸತಿ ಬಡಾವಣೆಯನ್ನು ಬಂಗಾರಪೇಟೆ ತಾ ಬೇತಮಂಗಲ ಹೋಬಳಿ ಪೊಟ್ಟೆಪಲ್ಲಿ ಗ್ರಾಮದಲ್ಲಿ ರಾಜೀವ್‌ಗಾಂಧಿ ವಸತಿ ಬಡಾವಣೆಯನ್ನು ಕೆ ಜಿ ಎಫ್ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಲಾಗಿದೆ

ಆ) ಈ ಬಡಾವಣೆಯಲ್ಲಿ ಕಾಯ್ದಿರಿಸಿರುವ ನಾಗರೀಕ ಸೌಲಭ್ಯ ನಿವೇಶನಗಳ ವಿವರಗಳು

1) 330 x 360 ಅಡಿಗಳು

2) 60 x 80 ಅಡಿಗಳು

ಉದ್ದೇಶಿಸಿರುವ ವಾಣಿಜ್ಯ ಸಂಕೀರ್ಣಕ್ಕಾಗಿ

1) 170 x 100 ಅಡಿಗಳು

ಇದರೊಂದಿಗೆ 3 ಎಕರೆ ಜಮೀನನ್ನು ಕರ್ನಾಟಕ ಕೊಳಚೆ ನಿರ್ಮಾಣ ಮಂಡಳಿ ಬೆಂಗಳೂರು ಇವರಿಗೆ ಉಚಿತವಾಗಿ ನೀಡಲಾಗಿದೆ

ಇ) ಈ ಬಡಾವಣೆಯನ್ನು ಪ್ರಾಧಿಕಾರ ವತಿಯಿಂದ ಹಾಗೂ ಬಡಾವಣೆಯಲ್ಲಿ ನಿರ್ಮಿಸಿರುವ ನಿವೇಶನಗಳ ಮಾರಾಟ ಮಾಡಿ ಬಂದಿರುವ ಆದಾಯದಿಂದ ಬಡಾವಣೆಯನ್ನು ನಿರ್ಮಿಸಲಾಗಿದೆ

1501 (1666) ಶ್ರೀ ರಾಜೇಂದ್ರನ್ ಎಸ್ (ಕೆ ಜಿ ಎಫ್) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ ಜಿ ಎಫ್ ಪಟ್ಟಣದ ಉರಿಗಾಂ ಪೇಟೆಯಲ್ಲಿದ್ದ ಕುಡಿಯುವ ನೀರಿನ ಜಲಸಂಗ್ರಹಾಗಾರವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕೆಡವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಜಲಸಂಗ್ರಹಾಗಾರವನ್ನು ಯಾವಾಗ ಕೆಡವಲಾಯಿತು,

ಇ) ಮೇಲ್ಕಟ್ಟದ ಜಲಸಂಗ್ರಹಾಗಾರವನ್ನು ಪುನರ್ ನಿರ್ಮಾಣ ಮಾಡಲು ಕೈಗೊಂಡ ಕ್ರಮವೇನು,

ಈ) ವಿಳಂಬವಾಗಲು ಕಾರಣಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಬಂದಿದೆ

ಆ) 2006ರ ಏಪ್ರಿಲ್ 24 ರಂದು ಕೆಡವಲಾಗಿದೆ

ಇ) ಕೆ ಜಿ ಎಫ್ ಪಟ್ಟಣದ ಉರಿಗಾಂ ಪೇಟೆ ಪ್ರದೇಶದಲ್ಲಿ ಮೇಲ್ಕಟ್ಟದ ಜಲಸಂಗ್ರಹಾಗಾರವನ್ನು ಪುನರ್ ನಿರ್ಮಿಸುವ ಹಾಗೂ ಕೊಳವೆ ಮಾರ್ಗ ಅಳವಡಿಸುವ ರೂ.50 00 ಲಕ್ಷಗಳ ಅಂದಾಜು ವೆಚ್ಚಕ್ಕೆ ಸರ್ಕಾರವು ಆದೇಶ ಸಂಖ್ಯೆ ನಅಇ 59 ಯುಡಬ್ಲ್ಯೂಎಸ್ 2006, ದಿನಾಂಕ 17–10–2006 ರಲ್ಲಿ ಆಡಳಿತಾತ್ಮ ಮಂಜೂರಾತಿ ನೀಡಿದೆ ಈ ಕಾಮಗಾರಿಯನ್ನು ಕೈಗೊಳ್ಳಲು ದಿನಾಂಕ 16 9 2006 ರಂದು ಹಾಗೂ 8 12 2006 ರಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು ಆದರೆ ಈ ಎರಡೂ ಟೆಂಡರ್ ಕರೆಗಳಿಗೆ ಸೂಕ್ತ ಪ್ರತಿಕ್ರಿಯೆ ಬಂದಿರುವುದಿಲ್ಲ ಮೂರನೇ ಕರೆ ಟೆಂಡರನ್ನು ಶೀಘ್ರದಲ್ಲೇ ಆಹ್ವಾನಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕ್ರಮ ಕೈಗೊಳ್ಳಲಾಗುತ್ತಿದೆ

ಈ) ಮೇಲೆ ಹೇಳಿದಂತೆ

1504 (1775) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) – ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?